**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಗುಂಡ್ಲುಪೇಟೆ</u>**

## <u>ಸಿಸಿ ನಂ. 473/2023</u>

**<u>ಫಿರ್ಯಾದುದಾರರು</u>** : **ತೆರಕಣಾಂಬಿ ಪೊಲೀಸ್ ಠಾಣೆ**

**ವಿರುದ್ಧ**

**<u>ಆರೋಪಿತರು</u>** :

1. **ಶ್ರೀ ಬಸವರಾಜೇಗೌಡ ಬಿ ಎಂ** ಲೇಟ್ ಮಹದೇವೆಗೌಡ
   33 ವರ್ಷ ವಯಸ್ಸು

2. **ಶ್ರೀಮತಿ ಶಿವಮಲ್ಲಮ್ಮ** ಕೋಂ ಲೇಟ್ ಮಹದೇವೇಗೌಡ
   60 ವರ್ಷ ವಯಸ್ಸು

3. **ಶ್ರೀ ನಾಗೇಂದ್ರ** ಬಿನ್ ಲೇಟ್ ಮಹದೇವೇಗೌಡ
   30 ವರ್ಷ ವಯಸ್ಸು

ಎಲ್ಲಾ ಆರೋಪಿತರ ವಾಸಃ
ಬೆಟ್ಟೇಗೌಡನಹುಂಡಿ ಗ್ರಾಮ
ಗುಂಡ್ಲುಪೇಟೆ ತಾಲ್ಲೂಕು.

## <u>ದೋಷಾರೋಪಣೆ</u>

**ಶ್ರೀ. ಶಿವಕುಮಾರ.ಜಿ.ಜೆ, ಬಿ.ಎ, ಎಲ್.ಎಲ್.ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಗುಂಡ್ಲುಪೇಟೆ** ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

**ಮೊದಲನೇಯದಾಗಿ,** ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಬೆಟ್ಟೇಗೌಡನಹುಂಡಿ ಗ್ರಾಮದ ಚಾಸಾ-1 ರವರಾದ ಎಂ ಶಾರದರವರನ್ನು 1ನೇ ಆರೋಪಿಯಾದ ನೀವು ದಿನಾಂಕಃ 24.05.2020 ರಂದು ಶಾಸ್ತ್ರೋಕ್ತವಾಗಿ ಮದುವೆಯಾಗಿದ್ದು, ಮದುವೆಯಾದ ಸುಮಾರು 6 ತಿಂಗಳುಗಳ ಕಾಲ ಚಾಸಾ-1 ರವರನ್ನು ಆರೋಪಿತರಾದ ನೀವುಗಳು ಚೆನ್ನಾಗಿ ನೋಡಿಕೊಂಡಿದ್ದು, ನಂತರ ಚಾಸಾ-1 ರವರಿಗೆ 1ನೇ ಆರೋಪಿಯಾದ ನೀವು ವರದಕ್ಷಿಣೆ ಹಣವನ್ನು ತರುವಂತೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ್ದು, ಆ ಮೂಲಕ ಆರೋಪಿತರಾದ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 498(ಎ) ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುವಿರಿ.

**ಎರಡನೇಯದಾಗಿ,** ದಿನಾಂಕಃ 14.05.2023 ರಂದು ರಾತ್ರಿ ಸಮಯದಲ್ಲಿ ಚಾಸಾ-1 ರವರು ಬೆಟ್ಟೇಗೌಡನಹುಂಡಿ ಗ್ರಾಮದ ತಮ್ಮ ಮನೆಯಲ್ಲಿದ್ದಾಗ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ಮಾಡಿ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುವಿರಿ.

**ಕೊನೇಯದಾಗಿ,** ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿ, ವರದಕ್ಷಿಣೆಯಾಗಿ ಹಣವನ್ನು ತರುವಂತೆ ಚಾಸಾ-1 ರವರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿ ಹೆಚ್ಚಿನ ವರದಕ್ಷಿಣೆಗೆ ಬೇಡಿಕೆ ಇಟ್ಟಿದ್ದು, ಆ ಮೂಲಕ ಆರೋಪಿತರಾದ ನೀವುಗಳು **4 ಡಿಪಿ ಆಕ್ಟ್** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯ ಒಳಗೆ ಮಾಡಿರುವಿರಿ.

ಆದ್ದರಿಂದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 24.02.2025

**(ಶಿವಕುಮಾರ ಜಿ. ಜೆ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ಸಿ., ಗುಂಡ್ಲುಪೇಟೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಗುಂಡ್ಲುಪೇಟೆ**

# ಸಿಸಿ ನಂ. 473/2023

**ಫಿರ್ಯಾದುದಾರರು** : **ತೆರಕಣಾಂಬಿ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ** : 1. **ಶ್ರೀ ಬಸವರಾಜೇಗೌಡ ಬಿ ಎಂ**

## ಆರೋಪಣೆ

**ಪ್ರಶ್ನೆ** :1: ಆಪಾದನೆಗಳ ಸಾರಾಂಶ ನಿಮಗೆ ಅರ್ಥವಾಯಿತೇ?

**ಉತ್ತರ** : ಅರ್ಥವಾಯಿತು

**ಪ್ರಶ್ನೆ** :2: ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

**ಉತ್ತರ** : ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

(ದಿನಾಂಕ : 24.02.2025 ರಂದು ಆರೋಪಿಗಳಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಅವರು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ)

**(ಶಿವಕುಮಾರ ಜಿ. ಜೆ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ., ಗುಂಡ್ಲುಪೇಟೆ**

1ನೇ ಆರೋಪಿಯ ಸಹಿ :

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಗುಂಡ್ಲುಪೇಟೆ**

# ಸಿಸಿ ನಂ. 473/2023

**ಫಿರ್ಯಾದುದಾರರು** : **ತೆರಕಣಾಂಬಿ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ** : 2. **ಶ್ರೀಮತಿ ಶಿವಮಲ್ಲಮ್ಮ**

## ಆರೋಪಣೆ

**ಪ್ರಶ್ನೆ** :1: ಆಪಾದನೆಗಳ ಸಾರಾಂಶ ನಿಮಗೆ ಅರ್ಥವಾಯಿತೇ?

**ಉತ್ತರ** : ಅರ್ಥವಾಯಿತು

**ಪ್ರಶ್ನೆ** :2: ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

**ಉತ್ತರ** : ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

(ದಿನಾಂಕ : 24.02.2025 ರಂದು ಆರೋಪಿಗಳಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಅವರು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ)

**(ಶಿವಕುಮಾರ ಜಿ. ಜೆ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ., ಗುಂಡ್ಲುಪೇಟೆ**

2ನೇ ಆರೋಪಿಯ ಸಹಿ :

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಗುಂಡ್ಲುಪೇಟೆ**

## ಸಿಸಿ ನಂ. 473/2023

**ಫಿರ್ಯಾದುದಾರರು** : **ತೆರಕಣಾಂಬಿ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ** : 3. **ಶ್ರೀ ನಾಗೇಂದ್ರ**

## ಆರೋಪಣೆ

**ಪ್ರಶ್ನೆ** :1: ಆಪಾದನೆಗಳ ಸಾರಾಂಶ ನಿಮಗೆ ಅರ್ಥವಾಯಿತೇ?

**ಉತ್ತರ** : ಅರ್ಥವಾಯಿತು

**ಪ್ರಶ್ನೆ** :2: ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ?

**ಉತ್ತರ** : ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

(ದಿನಾಂಕ : 24.02.2025 ರಂದು ಆರೋಪಿಗಳಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಅವರು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ)

**(ಶಿವಕುಮಾರ ಜಿ. ಜೆ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ., ಗುಂಡ್ಲುಪೇಟೆ**

3ನೇ ಆರೋಪಿಯ ಸಹಿ :